ಮುಲ್ಕಿ ಅಮಲದಾರರ ಸಲುವಾಗಿ ಸೂಚನೆಗಳು.

ಕಲೆಕ್ಟರನ, ಪ್ರಾಂತ ಅಮಲದಾರರ ಮತ್ತು ಮಾಮಲೇದಾರರ ಕರ್ತವ್ಯಗಳು ಗ್ರಾಮಸುಧಾರಣೆಯ ಕೈಪಿಡಿಯ ಪುರವಣಿಯಲ್ಲಿ ವಿವರಿಸಲ್ಪಟ್ಟವೆ, ಮತ್ತು ಅವುಗಳನ್ನು ಇದರಡಿಗೆ ಪುನಃ ಕೊಟ್ಟಿರುತ್ತದೆ :—

೧. ಉದ್ದೇಶಗಳು.

ಸದರಿ ಯೋಜನೆಯು, ಮುಖ್ಯವಾಗಿ, ಸದರಿ ಚಳವಳಿಯಲ್ಲಿ ಖಾಸಗಿ ಜನರು ಮಾಡಬೇಕಾದ ಕೆಲಸದ ಭಾಗಕ್ಕೆ ಸಂಬಂಧಿಸುತ್ತದೆ. ಈ ಟಿಪ್ಪಣಿಯಲ್ಲಿ ಅದೇ ವಿಷಯವನ್ನು ಕುರಿತು ಸರಕಾರೀ ರೀತಿಯಿಂದ ವಿವೇಚನೆ ಮಾಡಿರುತ್ತದೆ.

೨. ಗ್ರಾಮಸುಧಾರಣೆ.—ಮುಲ್ಕಿ ಅಮಲದಾರನ ಅನೇಕ ಕರ್ತವ್ಯಗಳಲ್ಲಿ ಗ್ರಾಮಸುಧಾರಣೆಯು ಒಂದಾಗಿದೆ; ಕೆಲವು ಮುಲ್ಕಿ ಅಮಲದಾರರು ಇದನ್ನು ತಮ್ಮ ಮುಖ್ಯ ಕರ್ತವ್ಯವನ್ನಾಗಿ ಮಾಡುತ್ತಾರೆ. ಶಿಕ್ಷಣದ, ಒಕ್ಕಲತನದ, ಸಾರ್ವಜನಿಕ ಆರೋಗ್ಯದ, ಕೈಗಾರಿಕೆಗಳ, ಸಹಕಾರೀ ಮತ್ತು ಫಾರೆಸ್ಟ್ ಖಾತೆಗಳಂಥ ರಾಷ್ಟ್ರಸಂವರ್ಧನದ ಅಥವಾ ಲೋಕಕಲ್ಯಾಣ ಮಾಡುವ ಅನೇಕ ವಿಶಿಷ್ಟ ಸರಕಾರೀ ಖಾತೆಗಳು ಇದೇ ಉದ್ದೇಶವನ್ನು ನೆರವೇರಿಸುತ್ತಿವೆ. ಜಿಲ್ಲೆಯ ಮುಖ್ಯನಾದ ಕಲೆಕ್ಟರನು ತನ್ನ ಖಾತೆಯ ಮತ್ತು ಇತರ ಖಾತೆಗಳ ಪ್ರಯತ್ನಗಳನ್ನು ಸಂಘಟಿಸಿ ಅವುಗಳನ್ನು ಗ್ರಾಮಗಳಲ್ಲಿ ಒಟ್ಟಾಗಿ ಉಪಯೋಗಿಸುತ್ತಾನೆ. ಸದ್ಯದ ಯೋಜನೆಯ ಉದ್ದೇಶವು, ಈ ಪದ್ಧತಿಯನ್ನು ಬಲಗೊಳಿಸಿ ಸ್ಥಿರಗೊಳಿಸುವದೇ ಇದ್ದು, ಅದರ ಬದಲಾಗಿ ಬೇರೆ ಯಾವದೇ ವಿಧಾನವನ್ನು ಅಮಲಿನಲ್ಲಿ ತರುವದಾಗಿರುವದಿಲ್ಲ. ಅದು ಪರೀಕ್ಷಿಸಲ್ಪಟ್ಟ ಬಳಿಕ ಹಿತಕರವಾಗಿ ಕಂಡುಬಂದಿದೆಯೆಂಬದಕ್ಕೆ ಸದರಿ ಯೋಜನೆಯ ಸಂಬಂಧದಿಂದ ಬಂದಿರುವ ಅಭಿಪ್ರಾಯಗಳು ಸಾಕ್ಷಿಯಾಗಿವೆ.

೩. ಸದ್ಯದ ಪದ್ಧತಿಯು ಯೋಗ್ಯವಿದ್ದರೂ, ಅದನ್ನು ಸುಧಾರಿಸಲಿಕ್ಕೆ ಬರುವಂತಿದೆಯೆಂಬದು ತೀರ ಸ್ಪಷ್ಟವದೆ. ಕೆಲಸದ ಅಖಂಡತೆಯನ್ನು ಕಾಯ್ದುಕೊಳ್ಳುವ ಬಗ್ಗೆ ಸಾಕಷ್ಟು ಸಾಧನಗಳು ಇಲ್ಲದ್ದರಿಂದ ಉತ್ಸಾಹವೂ ಒಳ್ಳೇ ಕೆಲಸವೂ ನಿರರ್ಥಕವಾಗಿ, ಒಂದು ಖಾತೆಯ ಕೆಲಸವು ಮತ್ತೊಂದು ಖಾತೆಗೆ ತಿಳಿಯದಂತಾಗಿದೆ. ಈ ಯೋಜನೆಯ ಉದ್ದೇಶವು, ಹೆಚ್ಚು ಒಳ್ಳೇ ದಿಶೆಯಿಂದಲೂ, ಹೆಚ್ಚು ಅಖಂಡವಾಗಿಯೂ, ಹೆಚ್ಚು ಸುಸಂಘಟಿತವಾಗಿಯೂ ಮಾಡಲ್ಪಡುವ ಕೆಲಸವನ್ನು ಪೂರೈಸುವದಾಗಿದೆ.

೪. ಖಾಸಗಿ ಜನರ ಕೆಲಸವನ್ನು ಬೆಳಿಸಿ ಅದನ್ನು ಸಂಘಟಿಸುವಲ್ಲಿ ಸಹಾಯ ಮಾಡುವದು ಸದರಿ ಯೋಜನೆಯ ಮತ್ತೊಂದು ಉದ್ದೇಶವು. ಆದರೆ ಎಲ್ಲಕ್ಕೂ ಮಹತ್ವದ ಉದ್ದೇಶವು, ಗ್ರಾಮನಿವಾಸಿಗಳಲ್ಲಿ ಆತ್ಮಸುಧಾರಣೆಯ ಇಚ್ಛೆಯನ್ನುಂಟು ಮಾಡುವದಿರುತ್ತದೆ. ಈ ಸಂಗತಿಯಲ್ಲಿ ಖಾಸಗಿ ಜನರು ಅತಿ ಮಹತ್ವದ ಭಾಗವನ್ನು ವಹಿಸಬೇಕಾಗುವದು. ಆದರೆ ಖಾಸಗಿ ಜನರು, ಪ್ರಾರಂಭದಲ್ಲಿ, ಕೆಲ ಮಟ್ಟಿಗೆ ಸರಕಾರೀ ಸಹಾಯದ ಮೇಲೆ ಅವಲಂಬಿಸಲೇ ಬೇಕಾಗುವದು.

೫. ಈ ಪ್ರಶ್ನದ ಅತಿ ಮಹತ್ವದ ಸ್ವರೂಪವು, ಗ್ರಾಮನಿವಾಸಿಯಲ್ಲಿ ಸುಧಾರಣೆಯ ಇಚ್ಛೆಯನ್ನುಂಟುಮಾಡುವದಾಗಿದ್ದರೂ, ಈ ಸಂಗತಿಯಲ್ಲಿ ಈ ವರೆಗೆ

ದೊರೆತ ಯಶವು ಬಹಳ ಕಡಿಮೆಯಾಗಿದೆ. ಗ್ರಾಮನಿವಾಸಿಗಳಲ್ಲಿ ಜನಸೇವೆಯ ಮತ್ತು ಸ್ವಾವಲಂಬನದ ಬಗ್ಗೆ ಬೇಕಾದ ಹುರುಪನ್ನುಂಟುಮಾಡುವಲ್ಲಿ ಗ್ರಾಮ ಪಂಚಾಯತಗಳಾಗಲಿ ಸಹಕಾರೀ ಸಂಘಗಳಾಗಲಿ ಈ ವರೆಗೆ ನಿಜವಾದ ಯಶವನ್ನು ಪಡೆಯಲಿಕ್ಕೆ ಅಸಮರ್ಥವಾಗಿವೆಯೆಂಬದು ಎಲ್ಲರಿಗೂ ಗೊತ್ತಿದೆ. ಆದರೆ ಗ್ರಾಮನಿವಾಸಿಗಳಲ್ಲಿ ಹೆಚ್ಚು ಒಳ್ಳೇ ಪ್ರವೃತ್ತಿಯುಂಟಾಗುವಂತೆ ಮಾಡುವಲ್ಲಿ ಸುಸಂಘಟಿತ ಪ್ರಯತ್ನಗಳೇನೂ ಈ ವರೆಗೆ ಮಾಡಲ್ಪಟ್ಟಿಲ್ಲ. ಸರಕಾರೀ ಅಮಲ ದಾರರು ಮತ್ತು ಸ್ಥಾನಿಕ ಮಂಡಳಗಳು ಸರಕಾರದವರಿಂದ ಹಣವನ್ನು ಪಡೆಯಲಿಕ್ಕೆ ಸಮರ್ಥರಾದರೆ ಮತ್ತು ಆ ಹಣದಿಂದ ಯೋಗ್ಯ ಉಪಯೋಗ ಮಾಡಿಕೊಂಡರೆ ಮಾತ್ರ ಅವರು ಯಶಸ್ವಿಯಾದರೆಂದು ಜನರು ತಿಳಿಯುವ ಸಂಭವವದೆ. ಅತ್ಯುತ್ತಮನಾದ ಕಲೆಕ್ಟರನು ಯಾವನು ಅಥವಾ ಅತ್ಯುತ್ತಮವಾದ ಸ್ಥಾನಿಕ ಮಂಡಳವು ಯಾವದು ಎಂಬದರ ನಿಜವಾದ ಪರೀಕ್ಷೆಯು, ಅವರ ಮುಖಾಂತರವಾಗಿ ಸರಕಾರದ ಖರ್ಚಿನಿಂದ ಎಷ್ಟು ಬಾವಿಗಳು ಅಗಿಯಲ್ಪಟ್ಟವು ಅಥವಾ ಎಷ್ಟು ಮೈಲು ರಸ್ತೆಗಳು ಮಾಡಲ್ಪಟ್ಟವು ಎಂಬದೇ ಇದ್ದ ಪಕ್ಷಕ್ಕೆ, ಈ ಯೋಜನೆಯಿಂದ ಯಾವ ಕಾರ್ಯವೂ ಆಗಲಾರದು; ಮತ್ತು ಸದರಿ ಯೋಜನೆಯನ್ನು ಅಮಲಿನಲ್ಲಿ ತರಲಿಕ್ಕೆ ಈಗಿನ ಕಾಲವು ಅತಿ ಅಯೋಗ್ಯವಾಗುವದು. ಆದರೆ, ಈ ಪ್ರಾಂತದಲ್ಲಿಯೂ ಇತರ ಪ್ರಾಂತ ಗಳಲ್ಲಿಯೂ ಗ್ರಾಮಸುಧಾರಣೆಯಾಗಬೇಕೆಂಬ ಹೊಸದಾದ ಇಚ್ಛೆಯುಂಟಾಗಲಿಕ್ಕೆ ಹಣದ ಕೊರತೆಯೇ ಕಾರಣವಾಗಿದೆಯೆಂಬದು ನಿಜವು. ಈ ಯೋಜನೆಯ ಉದ್ದೇಶವು, ಗ್ರಾಂಟುಗಳನ್ನು ಪಡೆಯುವ ಪ್ರಯತ್ನದ ಬದಲಾಗಿ ಭಾಗ ವಹಿಸುವ ಮತ್ತು ಸಹಾಯ ಮಾಡುವ ಇಚ್ಛೆಯನ್ನುಂಟುಮಾಡುವದಾಗಿದೆ. ಸ್ಥಾನಿಕ ಸ್ವಾವಲಂಬನದ ಪ್ರಮಾಣದ ಮೇಲೆಯೇ ಗ್ರಾಂಟುಗಳು ಅವಲಂಬಿಸುವದು ಸ್ವಾಭಾವಿಕವು, ಆದರೆ ಈ ಮಾರ್ಗದಿಂದ ಸಾಕಷ್ಟು ಪ್ರಗತಿಯಾಗಿಲ್ಲ. ಮಾಡ ಬೇಕಾದ ಕಾರ್ಯವು ಬಹಳವಿರುತ್ತದೆ. ಖಾಸಗಿ ಕೆಲಸಗಾರರು ಮತ್ತು ಖಾಸಗಿ ಜನರ ಮಂಡಳಗಳು ಒಟ್ಟುಗೂಡಿ ಕಲೆಕ್ಟರನ ಮುಖಾಂತರ ಸರಕಾರದ ಖಾತೆಗಳೊಡನೆ ಹೆಚ್ಚು ಒಳ್ಳೇ ರೀತಿಯಿಂದ ಸಹಕಾರ ಮಾಡಿದರೆ, ಈ ಕಾರ್ಯವನ್ನು ಬಹಳ ಬೇಗ ಕೊನೆಗಾಣಿಸಬಹುದು.

೨. ಕೆಲಸದ ಪ್ರಾರಂಭವು.

೬. ಪ್ರಾರಂಭದ ಕೆಲಸವೆಂದರೆ, ಪ್ರತಿಯೊಂದು ಜಿಲ್ಲೆಯ ಕಲೆಕ್ಟರನು, ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷನ ಮತ್ತು ಅವಶ್ಯವಿದ್ದರೆ ಸ್ಕೂಲ್ ಬೋರ್ಡಿನ ಚೆಅರಮನ್ನನ ಮತ್ತು ಇತರರ ಆಲೋಚನೆಯನ್ನು ಕೇಳಿಕೊಂಡು, ಈ ಕಾರ್ಯದಲ್ಲಿ ಮನಃಪೂರ್ವಕವಾಗಿ ಕೆಲಸ ಮಾಡಬಹುದಾದ ವರ್ಚಸ್ಸುಳ್ಳ ಯಾವತ್ತು ಖಾಸಗಿ ಗೃಹಸ್ಥರನ್ನೂ, ಸಹಾಯ ಮಾಡಬಹುದಾದ ಖಾತೆಗಳ ವರಿಷ್ಠ ಸ್ಥಾನಿಕ ಅಮಲ ದಾರರನ್ನೂ ಒಂದು ಖಾಸಗಿ ಸಭೆಗೆ ಆಮಂತ್ರಿಸತಕ್ಕದ್ದು.

೭. ಪ್ರಾರಂಭಕ್ಕೆ, ಯಾವ ಕ್ಷೇತ್ರಗಳಲ್ಲಿ ಅಥವಾ ಗ್ರಾಮಗಳಲ್ಲಿ ಬೇರೆ ಬೇರೆ ಪ್ರಕಾರದ ಗ್ರಾಮಸುಧಾರಣೆಯ ಕೆಲಸಕ್ಕೆ ಉತ್ತೇಜನ ಕೊಟ್ಟರೆ ಯಶಸ್ಸು ದೊರೆಯುವ ಸಂಭವವು ಹೆಚ್ಚು ಇರುವದೆಂಬದನ್ನು ಪ್ರಾರಂಭದ ಸಭೆಯಲ್ಲಿ ಅಥವಾ ಸಭೆಗಳಲ್ಲಿ ಚರ್ಚೆ ಮಾಡಿ ನಿರ್ಣಯಿಸಬೇಕು. ಸದರಿ ನಿರ್ಣಯವು, ಹಿಂದೆ ಎಷ್ಟರ ಮಟ್ಟಿಗೆ ಯಶವು ದೊರೆತಿತ್ತೆಂಬದರ ಮೇಲೆಯೂ, ಸುಧಾರಣೆಗೆ ಕಾರಣರಾಗಿದ್ದ

ಜನರ ಮೇಲೆಯೂ ಬಹಳ ಮಟ್ಟಿಗೆ ಅವಲಂಬಿಸುವದು. ಕೆಲಸವು ಬೆಳೆದಂತೆ ಮತ್ತು ಪ್ರಯತ್ನಗಳು ಯಶಸ್ವಿಯಾದಂತೆ ಅಥವಾ ನಿಷ್ಫಲವಾದಂತೆ ಕಾರ್ಯಕ್ರಮದಲ್ಲಿ ಬದಲಾವಣೆಯು ಮಾಡಲ್ಪಡುವದು. ಸುಧಾರಣೆಯ ಕೆಲಸವನ್ನು ಜಿಲ್ಲೆಯಲ್ಲಿ ಕೈಕೊಳ್ಳಬೇಕೆಂದು ಪ್ರಾರಂಭದ ಸಭೆಯಲ್ಲಿ ಗೊತ್ತಾದರೆ, ಜಿಲ್ಲೆಯೊಳಗಿನ ಬೇರೆ ಬೇರೆ ಭಾಗಗಳಲ್ಲಿ ಕೈಕೊಳ್ಳಲ್ಪಡಬೇಕಾದ ಕೆಲಸದ ದಿಶೆಗಳನ್ನು ಗೊತ್ತುಮಾಡಿದ ಬಳಿಕ, ಕಲೆಕ್ಟರನು, ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷನ ಸಹಾಯದಿಂದ, ಬಂದು ಚಿಕ್ಕ ಹಾಗೂ ವರ್ಚಸ್ಸುಳ್ಳ ಜಿಲ್ಲಾ ಕಾರ್ಯಕಾರೀ ಕಮಿಟಿಯನ್ನು ಸ್ಥಾಪಿಸಬೇಕು. ಈ ಕಾರ್ಯಕಾರೀ ಕಮಿಟಿಯು, ಸದ್ಯದ ಸಂಘಟನೆಯ ಮತ್ತು ಪರಿಸ್ಥಿತಿಯ ಮೇಲಿಂದ ಅವಶ್ಯ ತೋರಿದಂತೆ, ಆರಿಸಲ್ಪಟ್ಟ ಗ್ರಾಮಗಳಲ್ಲಿ ಅಥವಾ ತಾಲೂಕುಗಳಲ್ಲಿ ಕೆಲಸವನ್ನು ಪ್ರಾರಂಭಿಸುವಂತೆ ಮಾಡಬೇಕು. ಜಿಲ್ಲಾ ಕಮಿಟಿಗೆ ತಾಲುಕಾ ಸಂಘಗಳನ್ನು ಜೋಡಿಸಬೇಕು, ಯಾಕೆಂದರೆ, ಸದರಿ ಕಮಿಟಿಯು ಯಾವದೇ ವಿಧಾನದ ಕೆಲಸವನ್ನು ಗೊತ್ತುಮಾಡಿದಾಗ, ಅದು, ಮುಲ್ಕಿ ಖಾತೆಯ ಮತ್ತು ಜಿಲ್ಲಾ ಲೋಕಲ್ ಬೋರ್ಡಿನ ಯಾವತ್ತು ಸ್ಥಾನಿಕ ಸಿಬಂದಿಯನ್ನು ತನ್ನ ಸಹಾಯಕ್ಕೆ ಕರೆಯಬಹುದು. ಮಾಮಲೇದಾರನು ತಾಲುಕಾ ಕಮಿಟಿಯ ಸಭಾಸದನಾಗಿದ್ದು ಬಹುಶಃ ಅದರ ಚೆಅರಮನ್ನನೂ ಆಗಬಹುದು.

೮. ಸಾಧ್ಯ ತೋರಿದ ಕೂಡಲೆ, ಜಿಲ್ಲಾ ಕಾರ್ಯಕಾರಿ ಕಮಿಟಿಯು ಸದರಿ ಚಳವಳಿಯನ್ನು ಪ್ರಸಿದ್ಧಗೊಳಿಸಬೇಕು, ಮತ್ತು ಆದಷ್ಟು ಹೆಚ್ಚು ಜನರ ಸಹಾನುಭೂತಿಯನ್ನೂ ಸಹಕಾರವನ್ನೂ ಪಡೆಯಬೇಕು ಮತ್ತು ಜಿಲ್ಲಾ ಗ್ರಾಮಸುಧಾರಣೆಯ ಸಂಸ್ಥೆಯ ಸಭಾಸದರಾಗಲಿಕ್ಕೆ ಜನರಿಗೆ ವಿನಂತಿ ಮಾಡಬೇಕು.

೯. ಕಲೆಕ್ಟರನು ಜಿಲ್ಲಾ ಕಾರ್ಯಕಾರಿ ಕಮಿಟಿಯ ಹುದ್ದೆಯ ನಾತೆಯ ಚೆಅರಮನ್ನನಾಗುವನು, ಮತ್ತು ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷನು ಹುದ್ದೆಯ ನಾತೆಯ ವಾಯಿಸ್-ಚೆಅರಮನ್ನನಾಗುವನು. ಈ ಕಮಿಟಿಯು ಕೆಲ ಕಾಲದ ವರೆಗೆ ಕೆಲಸ ನಡಿಸಿದ ಬಳಿಕ, ಈ ಕೆಳಗಿನಂತೆ ಜಿಲ್ಲಾ ಸಂಘಟನೆಯ ಅಧಿಕಾರಿಗಳನ್ನು ರಚಿಸಬಹುದು :—

ಸಾಮಾನ್ಯ ಕಾರ್ಯಕಾರಿ ಕಮಿಟಿಯು.

ಹುದ್ದೆಯ ನಾತೆಯ ಚೆಅರಮನ್ನನು.—ಕಲೆಕ್ಟರನು.

ಹುದ್ದೆಯ ನಾತೆಯ ವಾಯಿಸ್-ಚೆಅರಮನ್ನನು.—ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷನು.

ಕಾರ್ಯಗಳು.—ಗ್ರಾಮ ಸಂಘಟನೆಯ ಕೆಲಸದ ಯಾವತ್ತು ಶಾಖೆಗಳ ಸಾಮಾನ್ಯ ನಿರ್ಬಂಧ ಮತ್ತು ಸಂಘಟನೆ ಮಾಡೋಣ, ಮತ್ತು ಸುಧಾರಣೆಯ ಕೆಲಸದ ಬಗ್ಗೆ ಯೋಗ್ಯವಾದ ಗ್ರಾಮಗಳನ್ನು ಆರಿಸೋಣ ಮತ್ತು ಮುಖ್ಯವಾಗಿ, ಯಾವ ಗ್ರಾಮಗಳಿಗೆ ಗ್ರಾಮಪಂಚಾಯತಗಳಿಂದಾಗುವ ಲಾಭಗಳನ್ನು ಮತ್ತು ಅವುಗಳ ಕೆಲಸವನ್ನು ಯೋಗ್ಯವಾಗಿ ವಿವರಿಸಿ ತಿಳಿಸಬಹುದೋ ಅಂಥ ಗ್ರಾಮಗಳನ್ನು ಆರಿಸೋಣ.

(೧)ನೇ ಪೋಟ-ಕಮಿಟಿಯು.

ಹುದ್ದೆಯನಾತೆಯ ಚೆಅರಮನ್ನನು.—ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷನು.

ಸಭಾಸದರು.—ಲೋಕಲ್ ಬೋರ್ಡುಗಳಿಂದಲೂ ಗ್ರಾಮಪಂಚಾಯತಗಳಿಂದಲೂ ಆರಿಸಲ್ಪಟ್ಟವರು.

ಕಾರ್ಯಗಳು.—ಗ್ರಾಮಪಂಚಾಯತಗಳ ಮೇಲ್ವಿಚಾರ, ಗ್ರಾಮದ ಮಾರ್ಗಗಳ ಮತ್ತು ನೀರಿನ ಪುರವಠೆಯ ಸುಧಾರಣೆ.

(೨)ನೇ ಪೋಟ-ಕಮಿಟಿಯು.

ಹುದ್ದೆಯನಾತೆಯ ಚೆಅರಮನ್ನನು.—ಜಿಲ್ಲಾ ಸ್ಕೂಲ್ ಬೋರ್ಡಿನ ಚೆಅರಮನ್ನನು.

ಸಭಾಸದರು.—ಸ್ಕೂಲ್ ಬೋರ್ಡುಗಳಿಂದ ಆರಿಸಲ್ಪಟ್ಟವರು ಮತ್ತು ಶಿಕ್ಷಣದ ವಿಷಯದಲ್ಲಿ ಸಂಬಂಧಪಡುವ ಖಾಸಗಿ ಗೃಹಸ್ಥರು.

ಕಾರ್ಯಗಳು.—ಗ್ರಾಮದ ಸ್ಕೂಲ್ ಕಮಿಟಿಗಳಿಗೆ ಪ್ರೋತ್ಸಾಹನ ಕೊಡುವದು, ಗ್ರಾಮನಿವಾಸಿಗಳು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುವಂತೆಯೂ, ಆ ಮಕ್ಕಳು ನಾಲ್ಕನೇ ಇಯತ್ತೆಯನ್ನು ಪಾಸಾಗುವ ವರೆಗೆ ಅವುಗಳನ್ನು ಅಲ್ಲಿ ಇಡುವಂತೆಯೂ ಅವರಿಗೆ ಪ್ರೋತ್ಸಾಹನ ಕೊಡುವದು, ಮತ್ತು ಸಾಮಾನ್ಯವಾಗಿ ಸಾಕ್ಷರತೆಯನ್ನು ಬೆಳಿಸುವದು.

(೩)ನೇ ಪೋಟ-ಕಮಿಟಿಯು.

ಸಭಾಸದರು.—ಸದ್ಯದ ಜಿಲ್ಲಾ ಮತ್ತು ತಾಲುಕಾ ಸಂವರ್ಧನ ಸಂಘಗಳ ಚೆಅರಮನ್ನರು ಮತ್ತು ಸಭಾಸದರು ಇವರೊಳಗಿಂದ ಆರಿಸಲ್ಪಟ್ಟವರು, ಸಹಕಾರೀ ಸಂಘಗಳಿಗೆ ಸಂಬಂಧಪಡುವವರು, ಮತ್ತು ಹಿತಸಂಬಂಧಪಡುವ ಇತರರು.

ಕಾರ್ಯಗಳು.—ಒಕ್ಕಲತನದ ಸುಧಾರಣೆಯನ್ನು ಮತ್ತು ಸಹಕಾರವನ್ನು ಬೆಳಿಸುವದು.

(೪)ನೇ ಪೋಟ-ಕಮಿಟಿಯು.

ಸಭಾಸದರು.—ಸಾಧ್ಯವಿದ್ದರೆ, ಬಹುತರ ಡಾಕ್ಟರರು ಮತ್ತು ಹೆಂಗಸರು.

ಕಾರ್ಯಗಳು.—ಆರೋಗ್ಯವನ್ನು ಮತ್ತು ಸ್ವಚ್ಛತೆಯನ್ನು ಬೆಳಿಸುವದು ಮತ್ತು ಸೂಲಗಿತ್ತಿ ಮುಂತಾದವರ ತರಬೇತಿಯು.

೧೦. ಸಾಮಾನ್ಯ ಕಾರ್ಯಕಾರೀ ಕಮಿಟಿಯು, ಸಾಧ್ಯವಿದ್ದಲ್ಲಿ, ತನ್ನ ಹಸ್ತಕರಾಗಿ ಕೆಲಸ ಮಾಡುವ ಬಗ್ಗೆ, ತಾಲೂಕುಗಳಲ್ಲಿ ಇಂಥಾ ಕಮಿಟಿಗಳನ್ನು (ಇವುಗಳ ಚೆಅರಮನ್ನನು ಮಾಮುಲೀದಾರನಾಗಬೇಕು) ಮತ್ತು ಪೋಟ-ಕಮಿಟಿಗಳನ್ನು ಸ್ಥಾಪಿಸುವಂತೆ ಮಾಡಬೇಕು. ಜಿಲ್ಹೆಯ ಸಾಮಾನ್ಯ ಕಾರ್ಯಕಾರೀ ಕಮಿಟಿಗೆ ಒಬ್ಬ ಸಂಬಳ ಪಡೆಯುವ ಕಾರ್ಯದರ್ಶಿಯ ಆವಶ್ಯಕತೆ ತೋರಬಹುದು.

೧೧. ಕಲೆಕ್ಟರನು ಜಿಲ್ಲಾ ಕಮಿಟಿಯ ಹುದ್ದೆಯನಾತೆಯ ಚೆಅರಮನ್ನನಾಗುವ ನೆಂಬ ಮತ್ತು ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷನು ಮತ್ತು ಸ್ಕೂಲ್ ಬೋರ್ಡಿನ ಚೆಅರಮನ್ನನು ಅವನೊಡನೆ ಕೆಲಸ ಮಾಡುವರೆಂಬ ಸಂಗತಿಯಿಂದ, ಸರಕಾರೀ ಅಮಲದಾರರ ಮತ್ತು ಲೋಕಲ್ ಬೋರ್ಡು ಹಾಗೂ ಸ್ಕೂಲ್ ಬೋರ್ಡುಗಳ ನಡುವೆ ಸಹಕಾರವುಂಟಾಗುವದೆಂಬ ಬಗ್ಗೆ ಖಾತ್ರಿಯಾಗುವದು.

೧೨. ಜಿಲ್ಲಾ ಕಮಿಟಿಗಳನ್ನು ನಡಿಸಿ ಕೆಲಮಟ್ಟಿಗೆ ಅನುಭವವು ದೊರೆತ ಕೂಡಲೆ ಅಥವಾ ಅದರ ತರುವಾಯ, ಭಾಗದ ಕಮಿಟಿಗಳನ್ನು ಸ್ಥಾಪಿಸುವದು ಯುಕ್ತ ತೋರಬಹುದು, ಯಾಕೆಂದರೆ, ಈ ಕಮಿಟಿಗಳ ಅಧ್ಯಕ್ಷರಾದ ರೆವ್ಹಿನ್ಯೂ ಕಮಿಶನರರ ಮುಖಾಂತರವಾಗಿ, ಚಳವಳಿಯ ಯಶಸ್ಸಿನ ಬಗ್ಗೆ ಯಾವ ಸರಕಾರದ ಖಾತೆಗಳ ಮುಖ್ಯರ ಸಹಾಯವು ಮತ್ತು ಆಲೋಚನೆಯು ಅವಶ್ಯವಿರುವವೋ ಆ ಖಾತೆಗಳ ಮುಖ್ಯರನ್ನು ಒಟ್ಟುಗೂಡಿಸುವದು ಸುಲಭವೆನಿಸುವದು.

೧೩. ಮೇಲೆ ವಿವರಿಸಿದ ನಮೂನೆಯ ವ್ಯವಸ್ಥೆಯ ಮೂಲಕ ಗ್ರಾಮನಿವಾಸಿಗಳಿಗೆ ಕೆಲಸವನ್ನು ಪ್ರಾರಂಭಿಸಲಿಕ್ಕೆ ಹುರುಪು ದೊರೆಯುವದು, ಮತ್ತು ಇಂಥ ಹುರುಪು, ಹಿಂದಿನಂತೆ, ಕೆಲಕಾಲದ ವರೆಗಾದರೂ ಸರಕಾರೀ ಅಮಲದಾರರ ಕಡೆಯಿಂದಲೇ ಬರಬೇಕಾಗಿದೆ. ಶಾಶ್ವತವಾದ ಯಶಸ್ಸು ದೊರೆಯಬೇಕಾದರೆ, ತಮ್ಮ ಜೀವನವು ಹೆಚ್ಚು ಸುಖಮಯವಾಗಬೇಕೆಂಬ ಇಚ್ಛೆಯು ಮುಂದೆ ಗ್ರಾಮನಿವಾಸಿಗಳಲ್ಲಿಯೇ ಉಂಟಾಗಬೇಕೆಂಬದು ನಿಜವು. ಆದರೆ ಸದ್ಯಕ್ಕಿಂತ ಕೆಲಮಟ್ಟಿಗಾದರೂ ಹೆಚ್ಚು ಸುಖಮಯವಾಗಿ ಜೀವನವು ಸಾಗಬೇಕೆಂದು ಗ್ರಾಮನಿವಾಸಿಗಳಲ್ಲಿ ಇಚ್ಛೆಯುಂಟಾಗಬೇಕಾದರೆ, ಅವರ ನಂಬಿಗೆಗೆ ಪಾತ್ರರಾದ ಸರಕಾರೀ ಅಮಲದಾರರು ಮತ್ತು ಖಾಸಗಿ ಗೃಹಸ್ಥರು ಮಾತ್ರ ಅವರೊಳಗೆ ಇಂಥ ಇಚ್ಛೆಯನ್ನುಂಟುಮಾಡಲಿಕ್ಕೆ ಸಮರ್ಥರಾಗುವರು. ಗ್ರಾಮಜೀವನವನ್ನು ಸುಧಾರಿಸುವ ಮಾರ್ಗಗಳು ಗ್ರಾಮನಿವಾಸಿಯ ಸಲುವಾಗಿ ವಿಚಾರಿಸಲ್ಪಡಬೇಕು, ಆದರೆ ನಿಜವಾಗಿ ಕೈಕೊಳ್ಳಬೇಕಾದ ಕೆಲಸಗಳನ್ನು ಆ ಗ್ರಾಮನಿವಾಸಿಗಳ ಆಲೋಚನೆಯನ್ನು ಪಡೆದು ಗೊತ್ತು ಮಾಡತಕ್ಕದ್ದು.

೩. ವಿಶಿಷ್ಟ ಅಮಲದಾರನು.

೧೪. ಸದರಿ ಯೋಜನೆಯ ವಿಷಯದಲ್ಲಿ ಲೇಖಗಳನ್ನು ಬರೆದು ಕಳಿಸಿದ ಅನೇಕ ಜನರು, ಸದರಿ ಯೋಜನೆಯನ್ನು ಬೆಳಿಸುವ ಬಗ್ಗೆ ಒಂದು ಹೊಸ ಖಾತೆಯಾಗಲಿ ವಿಶಿಷ್ಟ ಅಮಲದಾರನಾಗಲಿ ಇರಬೇಕಾಗುವದೋ ಹ್ಯಾಗೆಂಬ ಪ್ರಶ್ನವನ್ನು ಕುರಿತು ಚರ್ಚೆ ಮಾಡಿದ್ದಾರೆ. ಹೊಸದೊಂದು ಖಾತೆಯನ್ನು ಮಾಡಲಿಕ್ಕೆ ಹೆಚ್ಚು ಹಣವು ಬೇಕಾಗುವದು, ಆದರೆ ಅದು ಸರಕಾರದವರ ಕಡೆಗೆ ಇರುವದಿಲ್ಲ. ಕೆಲವು ಜನರು, ಈ ಯೋಜನೆಯ ಮೇಲೆ ಒಬ್ಬ ವಿಶಿಷ್ಟ ಅಮಲದಾರನನ್ನು ನೇಮಿಸುವದಕ್ಕೆ ವಿರುದ್ಧ ಇರುತ್ತಾರೆ, ಯಾಕೆಂದರೆ, ಅದರಿಂದ ಕಲೆಕ್ಟರರ ಜವಾಬದಾರಿಯು ಕಡಿಮೆಯಾಗಿ ಅವರು ಅದರಲ್ಲಿ ಮನಸ್ಸು ಹಾಕುವದು ಕಡಿಮೆಯಾಗುವದು. ಕಲೆಕ್ಟರರಿಗೆ ತಮ್ಮ ಜಿಲ್ಲೆಗಳಲ್ಲಿಯ ಗ್ರಾಮಗಳ ಸುಧಾರಣೆಯ ಬಗ್ಗೆ ಇರುವ ಜವಾಬದಾರಿಯನ್ನು ತೆಗೆದು ಹಾಕುವ ಯಾವದೇ ವ್ಯವಸ್ಥೆಗೆ ಸರಕಾರದವರು ಒಪ್ಪಲಾರರೆಂಬದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಇದಲ್ಲದೆ, ಗ್ರಾಮದ ಕೆಲಸದ ಈ ಶಾಖೆಯ ಬಗ್ಗೆ ಕಲೆಕ್ಟರರು

ರೆಫ್ಹಿನ್ಯೂ ಕಮೊಶನರರ ಹೊರ್ತು ಇತರ ಯಾರಾದರೂ ಅಮಲದಾರರಿಗೆ ಆಧೀನ ರಾಗಿರುವದಕ್ಕೆ ಸರಕಾರದವರು ಒಪ್ಪಿಕೊಳ್ಳಲಾರರು.

೧೫. ಆದರೆ, ಹಿಂದಿನ ಪ್ಯಾರಾಗ್ರಾಫಗಳಲ್ಲಿ ವರ್ಣಿಸಲ್ಪಟ್ಟಂಥ ಯಾವದೇ ಸಂಘ ಟನೆಯಿಂದ ಭಾಗಗಳ ಕಮಿಶನರರ ಮೇಲೆ ಬಹಳ ಕೆಲಸವು ಬೀಳುವದು ನಿಶ್ಚಯ ವೆಂದು ತೋರುತ್ತದೆ. ಪ್ರತಿಯೊಂದು ಭಾಗದ ಬೇರೆ ಬೇರೆ ಜಿಲ್ಹೆಗಳಲ್ಲಿ ಈ ಚಳ ವಳಿಯ ಸಲುವಾಗಿ ಮಾಡಲ್ಪಟ್ಟ ಕೆಲಸವನ್ನು ವ್ಯವಸ್ಥೆಗೊಳಿಸುವದು, ಆಯಾ ಭಾಗ ಗಳಲ್ಲಿರುವ ಖಾತೆಗಳ ಮುಖ್ಯ ಅಮಲದಾರರ ಸಹಾಯವನ್ನೂ ಆಲೋಚನೆಯನ್ನೂ ದೊರಕಿಸುವದು, ಮತ್ತು ಪ್ರತಿಯೊಂದು ಜಿಲ್ಹೆಯಲ್ಲಿ ಈ ಚಳವಳಿಯು ಸರಿಯಾದ ಮಾರ್ಗದಿಂದ ಮತ್ತು ಯೋಗ್ಯ ಉತ್ಸಾಹದಿಂದ ನಡಿಸಲ್ಪಡುತ್ತಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳುವದು ಕಮಿಶನರರ ಕರ್ತವ್ಯವಾಗುವದು. ಅದರಂತೆಯೇ, ಇಡೀ ಇಲಾಖೆಯಲ್ಲಿ ಸಮಗ್ರ ಚಳವಳಿಯನ್ನು ಬೆಳಸಿ ವ್ಯವಸ್ಥೆಗೊಳಿಸುವ ಮತ್ತು ಅದು ಯಶಸ್ವಿಯಾಗಲಿಕ್ಕೆ ಯಾವವುಗಳ ಸಹಾಯವೂ ಆಲೋಚನೆಯೂ ಅವಶ್ಯವಿರುವವೋ ಅಂಥ ಸರಕಾರೀ ಖಾತೆಗಳ ಮುಖ್ಯಸ್ಥರಿಗೂ ಸ್ವತಃ ಸರಕಾರಕ್ಕೂ ಅದನ್ನು ಜೋಡಿ ಸುವ ಕಾರ್ಯವು ಕಮಿಶನರರ ಪರಿಷತ್ತಿನ ಕಡೆಗೆ ಉಳಿಯುವದು. ಈ ಯೋಜ ನೆಯ ಎಲ್ಲ ಅಂಗಗಳಿಗಾಗಿ ಅವಶ್ಯವಿರುವಷ್ಟು ವೇಳೆಯನ್ನು ಕಮಿಶನರರು ಇತರರ ಸಹಾಯವಿಲ್ಲದೆ ಪೂರೈಸುವದು ಶಕ್ಯವಿಲ್ಲ, ಮತ್ತು ವಿಶೇಷವಾಗಿ ಅದರ ಪ್ರಾರಂಭ ದಲ್ಲಿಯಂತೂ ಶಕ್ಯವೇ ಇಲ್ಲ, ಯಾಕೆಂದರೆ, ಆಗ್ಯೆ ಬಹಳ ಪತ್ರವ್ಯವಹಾರವೂ, ಜಿಲ್ಹೆ ಗಳ ರಿಪೋರ್ಟುಗಳನ್ನು ಕುರಿತು ವಿಚಾರ ಮಾಡಿ ಅವುಗಳನ್ನು ಒಟ್ಟುಗೂಡಿಸುವ ಸಂಬಂಧದಿಂದ ಬಹಳ ಕಾರ್ಯವೂ ಇರುವದು. ದರಬಾರಗಳಿಂದಲೂ ಅವುಗಳ ಪೂರ್ವದಲ್ಲಿಯ ಚರ್ಚೆಗಳಿಂದಲೂ ಜನರ ಮನಸ್ಸಿನಲ್ಲಿ ಈ ಚಳವಳಿಯ ಬಗ್ಗೆ ಉಂಟಾದ ಸದಭಿಪ್ರಾಯವನ್ನು ಕಾಯುವದಕ್ಕಾಗಿ ಮತ್ತು ಅದರಿಂದ ವ್ಯಾವಹಾರಿಕ ಕಾರ್ಯವಾಗುವದಕ್ಕಾಗಿ ಕೂಡಲೇ ಕಾರ್ಯಾರಂಭವನ್ನು ಮಾಡುವದು ಇಷ್ಟವಿರು ತ್ತದೆ. ವಿಶಿಷ್ಟ ಅಮಲದಾರರನ್ನು ನಿರ್ಮಿಸುವದರಿಂದ ಕಾರ್ಯವು ಸತತವಾಗಿ ನಡೆಯಬಹುದೆಂದೂ ಪ್ರಯತ್ನಗಳಲ್ಲಿ ವ್ಯವಸ್ಥೆಯುಂಟಾಗಬಹುದೆಂದೂ ತೋರು ತ್ತದೆ, ಮತ್ತು ಈ ಅಮಲದಾರರು, ಪ್ರತಿಯೊಂದು ಜಿಲ್ಹೆಯ ಅನುಭವವನ್ನು ಒಟ್ಟು ಗೂಡಿಸಿ ಇತರ ಜಿಲ್ಹೆಗಳಿಗೆ ಹಿತವನ್ನು ಮಾಡಲಿಕ್ಕೆ ಸಮರ್ಥರಾಗುವರು.

೧೬. ಆದ್ದರಿಂದ ಸದ್ಯಕ್ಕೆ, ಪ್ರತಿಯೊಂದು ಭಾಗದಲ್ಲಿ ಗ್ರಾಮಸುಧಾರಣೆಯ ಅಮಲದಾರನ ಒಂದು ಹುದ್ದೆಯನ್ನು ನಿರ್ಮಿಸಬೇಕೆಂದೂ, ಅವನು ಪುನರ್ರಚನೆಯ ಕಾರ್ಯಕ್ಕಾಗಿ ಕಮಿಶನರನ ವಿಶಿಷ್ಟ ಸಹಾಯಕನೆಂದು ಕೆಲಸ ಮಾಡಬೇಕೆಂದೂ ಮತ್ತು ಅವನ ಮುಖತ್ಯಾರನಾಗಿ ಕಾರ್ಯ ನಡಿಸಬೇಕೆಂದೂ ಯೋಚಿಸಿರುತ್ತದೆ. ಜಿಲ್ಲಾ ಅಮಲದಾರನ ಮೇಲಿನ ನಿರ್ಬಂಧವೂ, ಆಯಾ ಭಾಗದಲ್ಲಿಯ ಗ್ರಾಮ ಸುಧಾರಣೆಯ ವಿಷಯದ ಜಬಾಬದಾರಿಯೂ ಕಮಿಶನರನ ಕಡೆಗೆ ಉಳಿಯುವವು. ಮಧ್ಯಭಾಗದ ಗ್ರಾಮಸುಧಾರಣೆಯ ಅಮಲದಾರನು ಈ ಕಾರ್ಯದ ಬಗ್ಗೆ ಕಮಿ ಶನರರ ಪರಿಷತ್ತಿನ ಕಾರ್ಯದರ್ಶಿಯಾಗಿ ಕೆಲಸ ಮಾಡಬೇಕು. ಇವರಲ್ಲಿ ಪ್ರತಿ ಯೊಬ್ಬ ಅಮಲದಾರನು ಕಾಲಕಾಲಕ್ಕೆ ಪ್ರಗತಿ ಪತ್ರಿಕೆಯನ್ನು ತಯಾರಿಸಬೇಕು, ಅದು ಕಮಿಶನರನಿಂದ ಪ್ರಸಿದ್ಧಿಸಲ್ಪಡಬೇಕು, ಮತ್ತು ಅದರಲ್ಲಿ, ಕಲೆಕ್ಟರರ ರಿಪೋರ್ಟು ಗಳ ಸಾರಾಂಶವಿದ್ದು ಅದು ಮಾಹಿತಿಗಾಗಿ ಮತ್ತು ಮಾರ್ಗದರ್ಶಕವಾಗುವದಕ್ಕಾಗಿ

ಎಲ್ಲ ಜನರ ಕಡೆಗೆ ಕಳುಹಿಸಲ್ಪಡಬೇಕು. ಮತ್ತು ಅದರಂತೆಯೇ, ಕಮಿಶನರರ ಪರಿಷತ್ತಿನ ಕಾರ್ಯದರ್ಶಿಯು ಕಮಿಶನರರ ಸಂಯುಕ್ತ ರಿಪೋರ್ಟುಗಳನ್ನು ತಯಾರ ಮಾಡುವನು ಮತ್ತು ಕಮಿಶನರರು ಖಾತೆಗಳ ಮುಖ್ಯಸ್ಥರ ಕೂಡ ಮತ್ತು ಸರಕಾರದ ಕೂಡ ಮಾಡತಕ್ಕ ಪತ್ರವ್ಯವಹಾರವನ್ನು ನಡಿಸುವನು.

೪. ಮಾಡಬಹುದಾದ ಕಾರ್ಯವು.

೧೭. ಮುಂದೆ ಮಾಡತಕ್ಕದ್ದಿರುವ ಕಾರ್ಯದ ಬಗ್ಗೆ ಬೇರೆ ಬೇರೆ ಕಡೆಯಲ್ಲಿ ಹೇಳಿದೆ, ಮತ್ತು ಸರಕಾರದ ಪ್ರತಿಯೊಂದು ಖಾತೆಯು ಉಪಯುಕ್ತವಾದ ಬೇರೆ ಬೇರೆ ಮಾರ್ಗಗಳನ್ನು ಸೂಚಿಸಲಿಕ್ಕೆ ಸಮರ್ಥವಾಗುವದು.

೧೮. ಆದಾಗ್ಯೂ, ಪ್ರತಿಯೊಬ್ಬ ಸರಕಾರೀ ನೌಕರನು ಅಮಲದಾರನಿದ್ದಂತೆಯೇ ನಾಗರಿಕನೂ ಇರುತ್ತಾನೆ; ಮತ್ತು ಅವನ ಖಾತೆಯ ಮುಖ್ಯ ಉದ್ದೇಶವು ಗ್ರಾಮಸುಧಾರಣೆಗೆ ಸಂಬಂಧಿಸಿರದಿದ್ದರೂ, ಅವನಿಗೂ ಗ್ರಾಮನಿವಾಸಿಗಳಿಗೂ ನಿಕಟ ಸಂಬಂಧ ಬರುತ್ತಿದ್ದು ಅವನಿಗೆ, ಈ ಯೋಜನೆಯ ಗೊತ್ತುಪಡಿಸಲ್ಪಟ್ಟ ಕಾರ್ಯ ಕ್ಷೇತ್ರದಲ್ಲಿ ಯಾರ ವಿಶಿಷ್ಟ ಕಾರ್ಯವು ಬರುವದೋ ಅಂಥ ಮನುಷ್ಯರಿಗಿಂತ ಹೆಚ್ಚಿಗೆ ಕಲ್ಯಾಣ ಮಾಡುವ ಸಂಧಿಯು ದೊರೆಯಬಹುದು. ಮೇಲಾಗಿ, ಕಚೇರಿಯಲ್ಲಿ ಕುಳಿತು ಗ್ರಾಮಸುಧಾರಣೆಯ ಕಾರ್ಯ ನಡಿಸುವಂಥ ಖಾತೆಗಳಲ್ಲಿಯ ಬಹುತರ ನೌಕರರಿಗೆ ಗ್ರಾಮನಿವಾಸಿಗಳ ಮೇಲೆ ಪ್ರತ್ಯಕ್ಷವಾಗಿ ವರ್ಚಸ್ಸನ್ನು ನಡಿಸಲಿಕ್ಕೆ ಬರುವಂತಿಲ್ಲ. ಎಲ್ಲ ವರ್ಗದ ಸರಕಾರೀ ನೌಕರರು ತಮ್ಮ ಮನೆಯಲ್ಲಿಯೂ ಸುತ್ತು ಮುತ್ತಲಿನ ಜನರಲ್ಲಿಯೂ ಸುಧಾರಣೆಯ ತತ್ವಗಳನ್ನು ಪಸರಿಸುವದು ಮತ್ತು ಸಂಘಗಳಿಗೆ ಸೇರಿ ಇಲ್ಲವೆ ಒಳ್ಳೇ ಉದಾಹರಣೆಯನ್ನಾದರೂ ಹಾಕಿಕೊಟ್ಟು ತಮ್ಮಿಂದಾದಷ್ಟು ಸಹಾಯ ಮಾಡುವದು ಬಹಳ ಇಷ್ಟವಿರುತ್ತದೆ. ಕೆಲವು ಸರ ಕಾರೀ ನೌಕರರಿಗೆ ಇಂಥ ಸಂಧಿಗಳು ದೊರೆಯುವದಿಲ್ಲ ಮತ್ತು ಕೆಲವರು ತಮಗೆ ದೊರೆತ ಸಂಧಿಗಳ ಉಪಯೋಗವನ್ನು ಈ ಮೊದಲೇ ಮಾಡಿಕೊಂಡಿರುತ್ತಾರೆ. ಆದರೆ ಸರಕಾರೀ ಅಮಲದಾರರು ತಮ್ಮ ಕೈಕೆಳಗಿನ ಜನರಿಗೆ ಈ ಸಂಗತಿಗಳನ್ನು ತಿಳಿಸಿ ಹೇಳಿ ಈ ಚಳವಳಿಗೆ ಸಹಾಯ ಮಾಡಬಹುದು.

೧೯. ಗ್ರಾಮನಿವಾಸಿಗಳು ಈ ಕಾರ್ಯದಲ್ಲಿ ಮನಸ್ಸು ಹಾಕುವಂತೆಯೂ ಸಹಕಾರ ಮಾಡುವಂತೆಯೂ ಮಾಡಲಿಕ್ಕೆ ಸರಕಾರೀ ಅಮಲದಾರರು ಅದಷ್ಟು ಪ್ರಯತ್ನ ಮಾಡಬೇಕೆಂಬದು ಮಹತ್ವದ್ದಿರುತ್ತದೆ. ಇದಕ್ಕೆ ಉತ್ತಮ ಮಾರ್ಗವೆಂದರೆ, ಗ್ರಾಮನಿವಾಸಿಗಳ ಮನಸ್ಸಿನ ಅಥವಾ ಇಚ್ಛೆಯ ವಿರುದ್ಧವಾಗಿ ಅವರನ್ನು ಸುಧಾರ ಣೆಯ ಮಾರ್ಗಕ್ಕೆ ಒತ್ತಾಯದಿಂದ ತರಲಿಕ್ಕೆ ಪ್ರಯತ್ನ ಮಾಡದೆ, ಯಾತರಿಂದ ಗ್ರಾಮದಲ್ಲಿಯ ಜೀವನಕ್ರಮವನ್ನು ಸುಧಾರಿಸಬೇಕೆಂದು ಯೋಚಿಸಿರುವದೋ ಅಂಥ ಪ್ರತಿಯೊಂದು ಸಂಗತಿಯಲ್ಲಿ ಗ್ರಾಮನಿವಾಸಿಗಳನ್ನು ಸಂಗಡ ಕರಕೊಂಡು ಕಾರ್ಯ ಮಾಡಲಿಕ್ಕೆ ಪ್ರಯತ್ನ ಮಾಡುವದೇ ಇರುತ್ತದೆ. ಹೊರಗಿನಿಂದ ಗ್ರಾಮನಿವಾಸಿಗಳ ಮೇಲೆ ಒತ್ತಾಯ ಮಾಡಲ್ಪಟ್ಟರೆ, ಯಾವ ಸುಧಾರಣೆಯೂ ನಿರಂತರವಾಗಿ ಉಳಿಯ ಲಾರದು. ಸ್ಥಾನಿಕ ಅಧಿಕಾರಿಗಳು ಚಾವಡಿಯಲ್ಲಾಗಲಿ ಗ್ರಾಮದಲ್ಲಿಯ ಇತರ ಸ್ಥಳದಲ್ಲಾಗಲಿ ಗ್ರಾಮನಿವಾಸಿಗಳನ್ನು ಒಟ್ಟುಗೂಡಿಸಿ ಅವರಿಗೆ ಭೆಟ್ಟಿಯಾಗಿ ಅವರ ಕೂಡ ಈ ಸಂಗತಿಗಳ ಬಗ್ಗೆ ಮಾತನಾಡಿದರೆ, ಯೋಚಿಸಿದ ಸುಧಾರಣೆಗಳ ಬಗ್ಗೆಯೂ

ಕೈಕೊಂಡ ಕಾರ್ಯಗಳ ಬಗ್ಗೆಯೂ ಗ್ರಾಮನಿವಾಸಿಗಳ ಕೂಡ ಚರ್ಚೆ ಮಾಡಲಿಕ್ಕೂ, ಅವುಗಳ ಲಾಭಗಳನ್ನು ತಿಳಿಸಿ ಹೇಳಲಿಕ್ಕೂ, ಗ್ರಾಮನಿವಾಸಿಗಳು ತಾವಾಗಿಯೇ ಮಾಡಬಹುದಾದ ಸೂಚನೆಗಳ ಬಗ್ಗೆ ವಿಚಾರ ಮಾಡಲಿಕ್ಕೂ ಅವರಿಗೆ ಬಹಳ ಸಂಧಿ ದೊರೆಯುವದು. ಗ್ರಾಮನಿವಾಸಿಗಳು ತಾವಾಗಿ ಹೆಚ್ಚಿಚ್ಚು ಕಾರ್ಯ ಮಾಡಿದ ಹಾಗೆ, ಸರಕಾರದವರಾದರೂ ಅವರ ಸಲುವಾಗಿಯೂ ಅವರ ಗ್ರಾಮದ ಸಲುವಾಗಿಯೂ ಹೆಚ್ಚಿಚ್ಚು ಸಹಾಯ ಮಾಡಲಿಕ್ಕೆ ಸಿದ್ಧರಾಗುವರೆಂಬದನ್ನು ಗ್ರಾಮನಿವಾಸಿಗಳ ಮನಸ್ಸಿನ ಮೇಲೆ ಅವರು ಬಿಂಬಿಸಬೇಕು.

ಈ ಕೆಳಗಿನ ಹೆಚ್ಚಿನ ಸೂಚನೆಗಳನ್ನು ಜೋಡಿಸಬಹುದು :—

ಪ್ರಾರಂಭದಲ್ಲಿ ಕಲೆಕ್ಟರನ ಮುಖ್ಯ ಕರ್ತವ್ಯವೆಂದರೆ, ತನ್ನ ಜಿಲ್ಲೆಯಲ್ಲಿ ಗ್ರಾಮ ಸುಧಾರಣೆಯನ್ನು ಮಾಡಲಿಕ್ಕೆ ಈ ಮೊದಲೇ ಏನೇನು ಮಾಡಲ್ಪಟ್ಟಿದೆ, ಯಾವ ಸಂಘಗಳಿಂದ ಮಾಡಲ್ಪಟ್ಟಿದೆ ಅಥವಾ ಯಾವ ವ್ಯಕ್ತಿಗಳಿಂದ ಮಾಡಲ್ಪಟ್ಟಿದೆಯೆಂಬದನ್ನು ತಿಳಿದುಕೊಳ್ಳುವದು ಮತ್ತು ಯಾವ ಗ್ರಾಮಗಳಲ್ಲಿ ಹೊಸದಾದ ಹೆಚ್ಚಿನ ಸಂವರ್ಧನೆಯ ಕಾರ್ಯವು ಯಶಸ್ವಿಯಾಗಬಹುದೆಂಬದನ್ನು ಮತ್ತು ಇದನ್ನು ನೆರವೇರಿಸಲಿಕ್ಕೆ ಯೋಗ್ಯವಾದ ಮಾರ್ಗವು ಯಾವದೆಂಬದನ್ನು ಕಂಡುಹಿಡಿಯುವದು ಇರುತ್ತದೆ. ಕಲೆಕ್ಟರನಿಗೆ, ಈ ಮಾಹಿತಿಯನ್ನು ದೊರಕಿಸಲಿಕ್ಕೆ, ಪ್ರಾಂತ ಅಮಲದಾರರ ಮತ್ತು ಮಾಮಲೇದಾರರ ರಿಪೋರ್ಟುಗಳು ಮತ್ತು ಜಿಲ್ಲೆಯ ಬಗ್ಗೆ ಸ್ವತಃ ಅವನಿಗೆ ಇದ್ದ ಮಾಹಿತಿಯು ಮತ್ತು ಅವನು ಪ್ರಾರಂಭದ ಸಭೆಗೆ ಅಥವಾ ಸಭೆಗಳಿಗೆ ಕರೆಯಿಸಿದ ಜನರು ಪೂರೈಸಿದ ಮಾಹಿತಿಯು, ಇವುಗಳಿಂದ ಸಹಾಯವಾಗುವದು.

ಕಲೆಕ್ಟರರು, ಪ್ರಾಂತ ಅಮಲದಾರರು ಮತ್ತು ಮಾಮಲೇದಾರರು ತಮ್ಮ ಕಡೆಗೆ ಯೋಜನೆಗಳ ಮತ್ತು ಪ್ರಗತಿಯ ಬಗ್ಗೆ ಬಂದ ರಿಪೋರ್ಟುಗಳನ್ನು ತಪಾಸಿಸಿ ನೋಡದೆ ಸಾದರ ಮಾಡುವದಕ್ಕಿಂತ, ಅವರು ಸರಕಾರೀ ಅಮಲದಾರರಿಂದ ಅಥವಾ ಖಾಸಗಿ ಜನರಿಂದ ಸೂಚಿಸಲ್ಪಟ್ಟ ಸುಧಾರಣೆಯ ಯೋಜನೆಗಳನ್ನು ಸ್ವತಃ ಗ್ರಾಮಕ್ಕೆ ಹೋಗಿ ಸವಿಸ್ತರವಾಗಿ ಮತ್ತು ಸಹಾನುಭೂತಿಪೂರ್ವಕವಾಗಿ ತಪಾಸಿಸುವದು ಹೆಚ್ಚು ಮಹತ್ವದ್ದಿರುತ್ತದೆ. ಇಲ್ಲದಿದ್ದರೆ, ಯಾವದೊಂದು ಭಾಗದ ಪ್ರತಿಯೊಂದು ಜಿಲ್ಲೆಯಲ್ಲಿ ಒಂದೇ ತರದ ಸಂಘವು ಸುಧಾರಣೆಯ ಒಂದೇ ತರದ ಯೋಜನೆಯನ್ನು ಕೈಕೊಳ್ಳಬಹುದೆಂಬ ಭಯವಿರುತ್ತದೆ.

ಜಿಲ್ಲೆಯಲ್ಲಿಯ ಕೆಲಸಗಾರರ ಉತ್ಸಾಹವನ್ನು ಕುಂದಿಸದೆ ಅಥವಾ ಹೆಚ್ಚಿಗೆ ಕೈಹಾಕದೆ ಮೇಲಿನಂತೆ ಆಗುವ ಮನೋವೃತ್ತಿಯನ್ನು ತಡೆಯುವದು ಕಮಿಶನರನ ಮತ್ತು ಅವನ ಅಸಿಸ್ಟಂಟನ ಮುಖ್ಯ ಕೆಲಸವಿರುವದು. ಯೋಚಿಸಲ್ಪಟ್ಟ ಯೋಜನೆಗಳ ಬೆಲೆಯನ್ನು ಕಂಡುಹಿಡಿಯುವಲ್ಲಿ ಕಮಿಶನರನು ಆ ಆ ಖಾತೆಗಳ ಮುಖ್ಯಸ್ಥರ ಆಲೋಚನೆಯನ್ನು ಕೇಳಿಕೊಳ್ಳಬೇಕು.

ಮುಲ್ಕಿ ಅಮಲದಾರರು ತಮ್ಮ ವಾಡಿಕೆಯ ತಪಾಸಣೆಯ ಕಾಲಕ್ಕೆ ಗ್ರಾಮಗಳಲ್ಲಿ ಚೌಕಶಿ ಮಾಡುವದರ ಮಹತ್ವವನ್ನು ಎಷ್ಟು ಹೇಳಿದರೂ ಕಡಿಮೆಯೇ. ಜಿಲ್ಲಾ ಲೋಕಲ್ ಬೋರ್ಡುಗಳ ಅಧ್ಯಕ್ಷರ ಕೂಡ, ಸ್ಕೂಲ್ ಬೋರ್ಡುಗಳ ಕೂಡ, ಖಾಸಗಿ ಕೆಲಸಗಾರರ ಕೂಡ ಮತ್ತು ಗ್ರಾಮನಿವಾಸಿಗಳ ಕೂಡ ಸ್ವತಃ ಸಂಬಂಧ ವಿಡುವದು ಬಹಳ ಮಹತ್ವದ್ದಿರುತ್ತದೆ.

ಗೌಡರು ತಮ್ಮ ಕರ್ತವ್ಯಗಳನ್ನು ಮತ್ತು ಜಬಾಬದಾರಿಗಳನ್ನು ತಿಳಿದುಕೊಂಡಿರುವರೆಂಬ ಬಗ್ಗೆ ಮತ್ತು ಗ್ರಾಮಪಂಚಾಯತದ ಆಕ್ಟಿನಿಂದ ಕೊಡಲ್ಪಟ್ಟ ಅಧಿಕಾರಗಳು ಮತ್ತು ಲಾಭಗಳು ಗೊತ್ತಾಗಿರುವವೆಂಬ ಬಗ್ಗೆ ಖಾತ್ರಿ ಮಾಡಿಕೊಳ್ಳುವದು ಎಲ್ಲ ತರಗತಿಯ ಮುಲ್ಕಿ ಅಮಲದಾರರ ಕರ್ತವ್ಯವಿರುತ್ತದೆ.

ಕಲೆಕ್ಟರರಿಂದ ಅವಲ ಕಾರಕೂನರ ವರೆಗೆ ಎಲ್ಲ ಮುಲ್ಕಿ ಅಮಲದಾರರು ಗ್ರಾಮಸುಧಾರಣೆಯ ವಿಷಯದ ಕೈಪಿಡಿಯ ಮೂರು ಭಾಗಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕು. ಅವರು, ಗ್ರಾಮನಿವಾಸಿಗಳಿಗೆ, ಪಂಚಾಯತವನ್ನು ಹ್ಯಾಗೆ ಸ್ಥಾಪಿಸಬೇಕು ಮತ್ತು ಅದರ ಕಾರಭಾರವನ್ನು ಸವಿಸ್ತರವಾಗಿ ಹ್ಯಾಗೆ ನಡಿಸಬೇಕು ಎಂಬದನ್ನು ತಿಳಿಸುವದಲ್ಲದೆ, ಲಾಭಗಳನ್ನು ತೋರಿಸಿಕೊಡಲಿಕ್ಕೆ ಸಹ ಸಮರ್ಥರಾಗಬೇಕು. ಓಣಿಗಳ ಮತ್ತು ಕಾಲುಹಾದಿಗಳ ಸುಧಾರಣೆ, ನೆಲದ ಪೃಷ್ಠ ಭಾಗದ ಗಟಾರುಗಳ ಸುಧಾರಣೆ ಮತ್ತು ಕೆರೆಬಾವಿಗಳ ಸುತ್ತಲಿನ ನೆಲದ ಸ್ವಚ್ಛತೆ, ಇವುಗಳ ಬಗ್ಗೆ ಸದರಿ ಕೈಪಿಡಿಯ ಮೂರನೇ ಭಾಗದಲ್ಲಿ ಹೇಳಿದ ಸವಿಸ್ತರವಾದ ಸೂಚನೆಗಳನ್ನು ಅವರು ತಿಳಿದುಕೊಂಡಿರಬೇಕು. ಅವರು ಗ್ರಾಮನಿವಾಸಿಗಳ ಮನೆಗಳ ಮತ್ತು ಅಂಗಳಗಳ ಸುಧಾರಣೆಯ ವಿಷಯದ ಸವಿಸ್ತರವಾದ ಸೂಚನೆಗಳನ್ನು ಕಲಿತುಕೊಳ್ಳಬೇಕು, ಮತ್ತು ಮಾದರಿಯ ಗ್ರಾಮ ಮತ್ತು ಮಾದರಿಯ ಮನೆ ಇವುಗಳಲ್ಲಿರುವ ತತ್ವಗಳನ್ನು ತಿಳಿದುಕೊಳ್ಳಬೇಕು. ಅವರಿಗೆ ತಜ್ಞ ಖಾತೆಗಳ ಅಮಲದಾರರು ಯಾರೆಂಬದು ಗೊತ್ತಿರಬೇಕು ಮತ್ತು ಅವರ ಆಲೋಚನೆಯನ್ನು ಕೇಳಿಕೊಳ್ಳಲಿಕ್ಕೆ ಗ್ರಾಮನಿವಾಸಿಗಳಿಗೆ ಹೇಳಬೇಕು, ಮತ್ತು ಯಾವದೊಂದು ವಿಶಿಷ್ಟ ಗ್ರಾಮಕ್ಕೆ ಯಾವ ಮುದ್ದೆಗಳ ಮೇಲೆ ಅವರ ಸಹಾಯವೂ ಆಲೋಚನೆಯೂ ಬೇಕಾಗಿರುವವೆಂಬ ಬಗ್ಗೆ ಇಂಥ ಅಮಲದಾರರ ಕಡೆಗೆ ಒಂದು ಸಂಕ್ಷಿಪ್ತವಾದ ರಿಪೋರ್ಟು ಮಾಡಲಿಕ್ಕೆ ಅವರು ಸಿದ್ಧರಿರಬೇಕು.